**ಅಸಲು ದಾವಾ ನಂಃ 32/2019**
**ಪಿ.ಡಬ್ಲ್ಯೂಃ 1,**

**ದಿನಾಂಕ :13-01-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟಿ ಸವಾಲು :- ಶ್ರೀ. ಜೆ. ಎ. ಎಮ್. ಪ್ರತಿವಾದಿ ಪರ ವಕೀಲರಿಂದ :**

ನಿಪಿ-8, 9, 10 ಇವುಗಳನ್ನು ಪ್ರತಿವಾದಿಯ ಕಚೇರಿಯಲ್ಲಿ ಬರೆಯಲಾಗಿದೆ. ಸದರಿ ಕಚೇರಿ ವಾಡಿಯ ಹಳೇ ಪೋಲಿಸ ಸ್ಟೇಶನ ಎದುರುಗಡೆ ಇರುವ ಅಂಬೇಕರ ಇವರ ಮನೆಯಲ್ಲಿ. ನಿಪಿ-8-ನ್ನು ಮಧ್ಯಾಹ್ನ 11 ರಿಂದ 12 ಒಳಗೆ ಬರೆಯಲಾಗಿದೆ. ನಿಪಿ-8- ನ್ನು ಬರೆಯವಾಗ ನಾನು ಮತ್ತು ಪ್ರತಿವಾದಿ ಇಬ್ಬರು ಇದ್ದೇವು ಮತ್ತು ಪ್ರತಿವಾದಿ ಬಳಿ ಕೆಲಸ ಮಾಡುವ ಇಬ್ಬರು ಇದ್ದರು ಅವರ ಹೆಸರು ಗೊತ್ತಿಲ್ಲಾ. ನಿಪಿ-8- ರ ಒಳಗಿನ ಅಂಶಗಳನ್ನು ಪ್ರತಿವಾದಿ ಬರೆದಿದ್ದಾನೆ. ನಿಪಿ-8 ರ ಒಳಗಿನ ಅಂಶಗಳನ್ನು ಪ್ರತಿವಾದಿಯೇ ತನಗೆ ತಿಳಿದ ಹಾಗೆ ಬರೆದಿದ್ದಾರೆ.

ನಾನು ಬಿ.ಕಾಂ. ಪದವಿಧರ. ಪ್ರತಿವಾದಿಯು ಸಹ ಬಿ.ಕಾಂ. ಪಾಸಾಗಿರಬಹುದು. ನಿಪಿ-8- ರಲ್ಲಿ Received a sum of Rs.3,00,000/- from Ashok D Dahihande R/o Wadi ಇದರಲ್ಲಿ ಯಾರಿಗೆ ಕೊಟ್ಟಿದ್ದೀರಿ ಎಂದು ಬರೆದಿಲ್ಲಾ ಎಂದರೆ ಸಾಕ್ಷಿ ತಾರಾಚಂದ ತಂದೆ ಕುಂದನಮಲ್ಲ ಅವರಿಗೆ ನೀಡಲಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-8 ರ ಬರವಣಿಗೆ ಪ್ರಕಾರ ಇದರಲ್ಲಿ hereby promise to pay to Tarachand S/o Kundanmal Mantri ಈ ಪ್ರಕಾರ ಸದರಿ ಮೊತ್ತವನ್ನು ತಾರಾಚಂದ ರವರಿಗೆ ಕೊಡಬೇಕು ಎಂದು ಬರೆಯಲಾಗಿದೆ ಎಂದರೆ ಸಾಕ್ಷಿ ನಾನು ಹಣ ಕೊಟ್ಟಿದ ಮೇಲೆ ನಿಪಿ-8ನ್ನು ಬರೆದುಕೊಟ್ಟಿದ್ದಾನೆ ಎಂದು ನುಡಿಯುತ್ತಾರೆ. ನಿಪಿ-8(ಎ) ಪ್ರತಿವಾದಿಯ ಸಹಿ. ನಿಪಿ-8(ಎ)

ಪ್ರತಿವಾದಿಯ ಸಹಿ ಅಲ್ಲಾ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-8ರ ಮೊತ್ತಕ್ಕೆ ಪ್ರತಿವಾದಿಯೇ ಜಾಮೀನು ಆಗಿರುತ್ತಾರೆ. ಸೆಕ್ಯೂರಟಿ ಅಂತಾ ಕೆಳಗೆ ಸಹಿ ಮಾಡಿರುವ ವ್ಯಕ್ತಿ ಪ್ರತಿವಾದಿಯ ಸಹಿ ಆಗಿರುತ್ತದೆ ಎಂದು ನುಡಿಯುತ್ತಾರೆ. ಸದರಿ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಿಪಿ-8ರ ದಾಖಲೆಗೆ ಪ್ರತಿವಾದಿಯೇ ಸಾಕ್ಷಿ ಎಂದು ಸಹಿ ಹಾಕಿದ್ದಾರೆ ಎಂದು ನುಡಿಯುತ್ತಾರೆ. ಆದ ಕಾರಣ ಸದರಿ ಸಹಿಯನ್ನು ನಿಪಿ-8(ಸಿ) ಎಂದು ಗುರುತಿಸಲಾಯಿತು. ದಿ: 4-6-2014 ರಂದು ರೂ.3,00,000/- ಪಡೆದ ಮೊತ್ತಕ್ಕೆ ನಿಪಿ-8 ಬಿಟ್ಟು ಬೇರೆ ಯಾವ ಭದ್ರತೆ ಪಡೆದಿಲ್ಲಾ.

3 ಲಕ್ಷ ಮೊತ್ತ ರೂ.500 ಮುಖ ಬೆಲೆಯ ಇತ್ತು. ರೂ.3 ಲಕ್ಷ ಹಣ ದಿ: 4-6-2014 ರಂದೇ ನೀಡಿದ್ದೇನೆ. ರೂ. 3 ಲಕ್ಷ ಮೊತ್ತ ನನ್ನ ಮನೆಯಲ್ಲಿ ಜಮೆ ಇದ್ದವು ಸದರಿ ಹಣ ಒಕ್ಕಲುತನ ಬಾಡಿಗೆ ಮುಖಾಂತರ ಬಂದ ಹಣ ಆಗಿರುತ್ತವೆ. ನಿಪಿ-8 ರ ಮೊತ್ತ ದಿ: 4-6-2014 ರಂದು ಬರೆದ ಎನ್ನಲಾದ ಅದು ಕಾಲದ ಪರಿಮಿತಿ ಒಳಗೆ ವಸೂಲಾಗದ ಸಾಲ ಎಂದರೆ ಸರಿಯಲ್ಲ.

ನಿಪಿ-9 ರ ಪ್ರಕಾರ ದಿ: 6-9-2014 ರಂದು ರೂ 1 ಲಕ್ಷ ಮೊತ್ತವನ್ನು ಯಾರಿಗೆ ಕೊಟ್ಟಿರಿ ಎಂದು ನಿಪಿ-9 ರಲ್ಲಿ ಬರೆದಿಲ್ಲಾ ಎಂದರೆ ಸಾಕ್ಷಿ ಪ್ರತಿವಾದಿಗೆ ನೀಡಲಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-9 ಪ್ರಕಾರ hereby promise to pay to Tarachand S/o K Mantri ಅಂತಾಬರೆಯಲಾಗಿದ್ದು ಆ ಪ್ರಕಾರ ತಾರಾಚಂದರವರಿಗೆ ಕೊಡಬೇಕಾಗಿದೆ ಎಂದು ಅರ್ಥ ಕೊಡುತ್ತದೆ ಎಂದರೆ ಸಾಕ್ಷಿ ಪ್ರತಿವಾದಿಗೆ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ.

ನಿಪಿ-9 ನ್ನು ಪ್ರತಿವಾದಿಯೇ ಬರೆದಿದ್ದಾನೆ. ನಿಪಿ-9 ನ್ನು ಪ್ರತಿವಾದಿಯ ಕಛೇರಿಯಲ್ಲಿ ಬರೆದಿದ್ದಾನೆ, ಬರೆಯುವಾಗ ಇಬ್ಬರೇ ಇದ್ದೇವು. ನಿಪಿ-9(ಎ) ಪ್ರತಿವಾದಿಯ ಸಹಿ ಅಲ್ಲಾ ಎಂದರೆ ಸರಿಯಲ್ಲ. ನಿಪಿ-9 ರ ಪ್ರಕಅರ ಪ್ರತಿವಾದಿಯೇ ಅದಕ್ಕೆ ಜಾಮಿನುದಾರ ಎಂದು ಸಹಿ ಮಾಡಿದ್ದಾರೆ ಎಂದು ನುಡಿಯುತ್ತಾರೆ. ನಿಪಿ-9 ಬರೆಯುವಾಗ ಯಾರು ಸಾಕ್ಷಿದಾರು ಇರಲಿಲ್ಲಾ. ಪ್ರತಿವಾದಿಗೆ ರೂ. 1 ಲಕ್ಷ ನೀಡಿದ ನಂತರ ನಿಪಿ-9 ಬರೆದುಕೊಟ್ಟಿದ್ದಾರೆ. ದಿ: 4-6-2014 ರಂದು ನೀಡಿದ ಮೊತ್ತ ಮತ್ತು ದಿ: 6-9-2014 ರಂದು ನೀಡಿದ ಮೊತ್ತ ಇದು ನನ್ನ ಒಕ್ಕಲುತನ ಮತ್ತು ಬಾಡಿಗೆ ಇಂದ ಬಂದಿದೆ ಇದನ್ನು ನನ್ನ ಆದಾಯ ತರಿಗೆಯಲ್ಲಿ ತೋರಿಸಿಲ್ಲಾ. ನಿಪಿ-9ರಲ್ಲಿ ಬರೆದ ಮೊತ್ತ ಅದು ಕಾಲ ಪರಿಮಿತ ವಸೂಲ ಆಗದ ಸಾಲ ಎಂದರೆ ಸರಿಯಲ್ಲ. ದಿ: 6-9-2017 ಕ್ಕೆ ಮೂರು ವರ್ಷ ಅವಧಿ ಮುಗಿದ ಕಾರಣ ಅದು ವಸೂಲ ಆಗದ ಸಾಲ ಎಂದರೆ ಸರಿಯಲ್ಲ.

ನಿಪಿ-10 ನ್ನು ಪ್ರತಿವಾದಿಯ ತನ್ನ ಕಛೇರಿಯಲ್ಲಿ ಮಧ್ಯಾಹ್ನ 2 ರಿಂದ 3 ಅವಧಿ ಒಳಗೆ ಬರೆದಿದ್ದಾನೆ. ನಿಪಿ-10 ರಲ್ಲಿ ಬರೆದ ಮೊತ್ತ ಕೊಟ್ಟ ಬಳಿಕ ಬರೆದುಕೊಟಿದ್ದಾರೆ. ನಿಪಿ-10 ನ್ನು ಯಾವ ದಿನಾಂಕ ವರ್ಷ ಬರೆಯಲಾಗಿದೆ ಅಂತಾ ಗೊತ್ತಿಲ್ಲಾ. ನಿಪಿ-10 ರಲ್ಲಿ ಬರೆದ ಮೊತ್ತ ಯಾರಿಗೆ ಕೊಡಲಾಗಿದೆ ಎಂದು ಅದರಲ್ಲಿ ಬರೆದಿಲ್ಲಾ ಎಂದರೆ ಸಾಕ್ಷಿ ಪ್ರತಿವಾದಿಗೆ ಕೊಡಲಾಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. ನಿಪಿ-10 ಪ್ರಕಾರ hereby promise to pay to Tarachand S/o K Mantri R/o Balaji Agencies R/o Wadi ಅಂತಾ ಬರೆಯಲಾಗಿದ್ದು ಆ ಪ್ರಕಾರ ತಾರಾಚಂದರವರಿಗೆ ಕೊಡಬೇಕಾದ ಮೊತ್ತ ಎಂದು ಅರ್ಥ ಕೊಡುತ್ತದೆ ಎಂದರೆ ಸಾಕ್ಷಿ ಪ್ರತಿವಾದಿಗೆ ಹಣ ನೀಡಿದ್ದೇನೆ ಎಂದು ನುಡಿಯುತ್ತಾರೆ.

ನಿಪಿ-10(ಎ) ಪ್ರತಿವಾದಿ ಸಹಿ ಅಲ್ಲ ಎಂದರೆ ಸರಿಯಲ್ಲ . ನಿಪಿ-10 ಪ್ರಕಾರ ರೂ.1,77,000/- ಹಣ ಕೊಟ್ಟಿದೆ ಎನ್ನಲಾದ ಮೊತ್ತಕ್ಕೆ ಯಾರು ಜಾಮೀನು ಅಂತಾ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿಯೇ ಜಾಮೀನು ಅಂತಾ ನುಡಿಯತ್ತಾರೆ. ಜಾಮೀನು ಅಂತಾ ಸಹಿ ಮಾಡಿದ ವ್ಯಕ್ತಿ ಪ್ರತಿವಾದಿಯ ಸಹಿ ಅಲ್ಲಾ, ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ರೂ.1,77,000/- ಮೊತ್ತವು ರೂ.500, 100/-, 200/- ಮುಖ ಬೆಲೆಯ ಹಣ ಇತ್ತು. ಸದರಿ ಮೊತ್ತದಲ್ಲಿ ರೂ.500, 100/-, 200/- ಮುಖ ಬೆಲೆಯ ಹಣ ಎಷ್ಟು ಇದ್ದವು ನನಗೆ ಹೇಳಲು ಬರುವುದಿಲ್ಲಾ.

ದಿ: 4-6-2014 ರಂದು ದಾಖಲೆ ಸೃಷ್ಟಿಸದ್ದು , ಅದೇ ರೀತಿ ದಿ: 6-9-2014 ರಂದು ಪ್ರಾಮಿಸರಿ ನೋಟಿ ಸೃಷ್ಟಿಸಿದ್ದು, ಅದೆ ರೀತಿ ದಿ: 30-09-2014 ರಂದು ಪ್ರಾಮಿಸರಿ ನೋಟ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ರೂ.3 ಲಕ್ಷ , ರೂ.1 ಲಕ್ಷ, ರೂ.1 ಲಕ್ಷ 77 ಸಾವಿರ ಹಣ ಇವೆಲ್ಲಾ ಒಕ್ಕಲುತನ ಮತ್ತು ಬಾಡಿಗೆ ಇಂದ ಬಂದಿವೆ. ರೂ.3 ಲಕ್ಷ , ರೂ.1 ಲಕ್ಷ, ರೂ.1 ಲಕ್ಷ 77 ಸಾವಿರ ಹಣ ಒಕ್ಕಲುತನ ಮತ್ತು ಬಾಡಿಗೆ ಇಂದ ಬಂದಿರುತ್ತವೆ ನಿಖರವಾಗಿ ಈ ವೃತ್ತಿ ಇಂದ ಬಂದಿದೆ ಎಂದು ಹೇಳಲು ಆಗುವುದಿಲ್ಲಾ. ಕೃಷ್ಟಿ ಉತ್ಪನ್ನ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದ ರಶಿದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲಾ. ಬಾಡಿಗೆದಾರರಿಂದ ವಸೂಲಿ ಮಾಡಿದ ಹಣಕ್ಕೆ ನಾನು ರಶಿದಿ ನೀಡುವುದಿಲ್ಲಾ. ನಿಪಿ-10ರಲ್ಲಿ ಬರೆದ ಮೊತ್ತ ಅದು ಕಾಲ ಪರಿಮಿತಿ ವಸೂಲ ಆಗದ ಸಾಲ ಎಂದರೆ ಸರಿಯಲ್ಲ. ದಿ: 30-9-2017 ಕ್ಕೆ ಮೂರು ವರ್ಷ ಅವಧಿ ಮುಗಿದ ಕಾರಣ ಅದು ವಸೂಲ ಆಗದ ಸಾಲ ಎಂದರೆ ಸರಿಯಲ್ಲ.

**ಅಸಲು ದಾವಾ ನಂಃ 32/2019**
**ಪಿ.ಡಬ್ಲ್ಯೂಃ 1,**

ನಿಪಿ-6 ಚೆಕ್ ಎಂದು ನೀಡಲಾಯಿತು ಎಂದು ನನಗೆ ಈಗ ದಿನಾಂಕ ನೆನೆಪಿಲ್ಲಾ. ನಿಪಿ-6 ರಲ್ಲಿ ಬರೆದಿರುವ ಬರೆವಣಿಗೆ ಪ್ರತಿವಾದಿ ಬರೆದಿರುತ್ತಾನೆ. ನಿಪಿ-6(ಎ) ಪ್ರತಿವಾದಿಯ ಸಹಿ ಅಲ್ಲಾ, ನಾನೇ ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಿಪಿ-6ರ ಚೆಕ್ ನಂ: 658885 ಎಂದರೆ ಸರಿ. ಪ್ರತಿವಾದಿ ಮನೆ ಬೇಕಾದ ವಸ್ತುಗಳನ್ನು ಮಾರಾಟ ಮಾಡುತ್ತಿದ್ದ. ಪ್ರತಿವಾದಿ ವ್ಯಪಾರ ಚೆನ್ನಾಗಿ ಇದ್ದ ಕಾರಣ ಆತ ಯಾವುದೇ ವ್ಯವಾಹಾರ ಮಾಡಬೇಕಾದರೆ ಚೆಕ್ ಮುಖಾಂತರ ವ್ಯವಹರಿಸುತ್ತಿದ್ದ ಎಂದರೆ ನನಗೆ ಗೊತ್ತಿಲ್ಲಾ. ಬಾಲಾಜಿ ಏಜೆನ್ಸಿ ಮಾಲಿಕ ಪ್ರತಿವಾದಿ ಎಂದರೆ ಸರಿ. ನಿಡಿ-1 ಪ್ರತಿವಾದಿಯ ಏಜೆನ್ಸಿಯ ದಿನಾಂಕ: 01-01-2014 ರ ದಿ: 31-12-2014 ಅಕೌಂಟ್ ಎಕ್ಸಾಕ್ಟ ಎಂದರೆ ಸರಿ. ಪ್ರತಿವಾದಿ ತನ್ನ ವ್ಯವಹಾರ ಚೆಕ್ ಮುಖಾಂತರ ವ್ಯವಹರಿಸುತ್ತಿದ್ದ ಎಂದರೆ ಸರಿ. ದಿ: 2-6-2014 ರಂದು ಚೆಕ ನಂಬರ 65884 ಪವನ ಏಜೆನ್ಸಿ ನೀಡಿದ್ದಾರೆ ಎಂದರೆ ಸರಿ. ಅದರ ಮೊತ್ತ ರೂ.97,320/- ಎಂದರೆ ಸರಿ. ದಿ: 2-6-2014 ರಂದು ಚೆಕ ನಂಬರ:658884 ಪವನ ಏಜೆನ್ಸಿ ನೀಡಿದ್ದಾರೆ ಅದರ ವ್ಯವಹಾರ ನಿಡಿ-1 ರಲ್ಲಿ ಉಲ್ಲೇಖ ಇದೆ ಎಂದರೆ ಸಾಕ್ಷಿ ಒಪ್ಪಿದ ಕಾರಣ ಆ ಭಾಗವನ್ನು ನಿಡಿ-1(ಎ) ಎಂದು ಗುರುತಿಸಲಾಯಿತು. ನಿಡಿ-1 ಪ್ರಕಾರ ಪ್ರತಿವಾದಿ ಚಕ್ ನಂಬರ :658886 ಅದನ್ನು ದಿ: 5-6-2014 ರಂದು ಬಿವರೇಜಸ್ಸ ರವರಿಗೆ ನೀಡಿದ ವ್ಯವಹಾರ ನಿಡಿ-1 ರಲ್ಲಿ ಉಲ್ಲೇಖ ಇದ್ದು ಅದನ್ನು ಸಾಕ್ಷಿ ಒಪ್ಪಿದ ಕಾರಣ ಆ ಭಾಗವನ್ನು ನಿಡಿ-1(ಬಿ) ಎಂದು ಗುರುತಿಸಲಾಯಿತು. ಚೆಕ್ ನಂಬರ : 658884 ಮತ್ತು 658886 ಈ ವ್ಯವಹಾರಗಳು ದಿ: 2-6-2014 ಮತ್ತು 5-6-2014ರ ಅವಧಿಯಲ್ಲಿ ನಡೆದಿದ್ದಾವೆ ಎಂದರೆ ಸರಿ.

ಅದೇ ರೀತಿ ಪ್ರತಿವಾದಿ ಚಕ್ ಮುಖಾಂತರ ವ್ಯವಹಾರ ಮಾಡುತ್ತಿದ್ದ ಎಂದರೆ ಸರಿ. ಚೆಕ್ ನಂಬರ : 658884 ಮತ್ತು 658885 ಮತ್ತು 658886 ಚೆಕ್ ವ್ಯವಹಾರಗಳು 2014 ರ ಅವಧಿಯಲ್ಲಿಯೇ ವ್ಯವಹಾರ ಆಗಿರುತ್ತವೆ ಎಂದರೆ ಸಾಕ್ಷಿ ನಿಪಿ-6 ನ್ನ ಪ್ರತಿವಾದಿ ನೀಡಿದ್ದು ಅದು ಯಾವ ಚೆಕ್ ಬುಕ್ ನೀಂದ ನೀಡಿದ್ದಾರೆ ಎಂದು ನನಗೆ ಗೊತ್ತಿಲ್ಲಾ ಎಂದು ನುಡಿಯುತ್ತಾರೆ. ನಿಡಿ-8 ರಿಂದ 10 ರ ಮೊತ್ತ ವ್ಯವಹಾರ ರೂ.5,77,000/- ಕೊಟ್ಟಿರುತ್ತೇನೆ ಎಂದು ತೋರಿಸಿರುತ್ತೇನೆ. ಪ್ರತಿವಾದಿ ಇಲ್ಲಿಯವರೆಗೆ ನನಗೆ ಒಂದು ರೂಪಾಯಿ ಸಹ ಮರುಪಾವತಿ ಮಾಡಿಲ್ಲಾ. ದಿ: 30-09-2014 ರಂದು ಹಣ ನೀಡಿದ ನಂತರ ನಾನು ಸಾಕಷ್ಟು ಬಾರಿ ಹಣ ನೀಡು ಎಂದು ಕೇಳಿದ ನಂತರ ಪ್ರತಿವಾದಿಯು ತನ್ನ ಏಜೆನ್ಸಿ ಬಂದ ಮಾಡಿ ಹೈದ್ರಾಬಾದಗೆ ಹೋಗಿರುತ್ತಾನೆ. ಪ್ರತಿವಾದಿ ಯಾವಾಗ ಏಜೆನ್ಸಿ ಬಂದ ಮಾಡಿ ಹೈದ್ರಾಬಾದಗೆ ಶಿಫ್ಟ ಆದನು ಎಂದು ನನಗೆ ಹೇಳಲು ಆಗುವುದಿಲ್ಲಾ. ಪ್ರತಿವಾದಿಗೆ ವಾಡಿಗೆ ನಾನು ಆತನ ಮನೆಗೆ ಹೋಗಿ ಕೇಳುತ್ತಿದ್ದೆ ನಂತರ ಫೋನ ಮುಖಾಂತರ ಕೇಳುತ್ತಿದ್ದೆ ಎಂದು ನುಡಿಯುತ್ತಾರೆ. ಪ್ರತಿವಾದಿ ಕೊಂಚೂರ ಹನುಮಾನ ದೇವಸ್ಥಾನದ ಟ್ರಸ್ಟಿ ಇದ್ದು ಅದಕ್ಕೆ ರಾಜಿನಾಮೆ ನೀಡಿ ಹೈದ್ರಾಬಾದಗೆ ಶಿಫ್ಟ ಆಗಿರುತ್ತಾನೆ. ನಾನು ಪ್ರತಿವಾದಿಯ ಖಾಯಂ ಗ್ರಾಹಕ ಎಂದರೆ ಸರಿಯಲ್ಲ. ಪ್ರತಿವಾದಿ ಯಾವ ವರ್ಷ, ತಿಂಗಳು, ದಿನಾಂಕ ವಾಡಿಯನ್ನು ಬಿಟ್ಟು ಹೈದ್ರಾಬಾದಗೆ ಶಿಫ್ಟ ಆಗಿದ್ದಾನೆ ಎಂದು ಹೇಳಲು ಆಗುವುದಿಲ್ಲಾ. ಪ್ರತಿವಾದಿ 2014 ರಲ್ಲಿ ವಾಡಿ ಗ್ರಾಮ ಬಿಟ್ಟು ಹೈದ್ರಾಬಾದಗೆ ಶಿಫ್ಟ ಆಗಿದ್ದಾನೆ ಎಂದರೆ ಗೊತ್ತಿಲ್ಲಾ. ಪ್ರತಿವಾದಿ ನನ್ನ ಜೊತೆ ಗೆಳತನ ಇದ್ದು ಆತನ ಜೊತೆ ವ್ಯವಹಾರ ಮಾಡಿ ತೊಂದರೆ ಕೊಟ್ಟ ಕಾರಣ ಆತನು ನನ್ನ ಕಿರುಕುಳಕ್ಕೆ ವಾಡಿ

ಗ್ರಾಮ ಬಿಟ್ಟು ಹೈದ್ರಾಬಾದಗೆ ಓಡಿ ಹೋದನು ಎಂದರೆ ಸರಿಯಲ್ಲ. ಪ್ರತಿವಾದಿ ಬಾಲಾಜಿ ಏಜೆನ್ಸಿ ವ್ಯವಹಾರ ಮಾಢುತ್ತಿದ್ದು ನಾನು ಆತನಿಂದ ಸಾಮಾನುಗಳನ್ನು ಖರಿದಿಸಿ ಆತನಿಗೆ ಹಣ ಕೊಡದೇ ಸತಾಯಿಸಿ ಆತನ ಮೇಲೆ ಸುಳ್ಳು ದಾವೆ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ನಾನು ಮೋಸ, ವಂಚನೆ, ಪೋರ್ಜರಿ ಜನರ ಮೇಲೆ ಮಾಡಿದ ಕಾರಣ ಅವರು ನನ್ನ ಮೇಲೆ ಸಾಕಷ್ಟು ಕ್ರಿಮಿನಲ್ ಕೇಸ ಹಾಕಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**